ಪಿಡಬ್ಲ್ಯೂ1 ಓ.ಎಸ್.ನಂ.127/2018

ದಿನಾಂಕಃ 26-08-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ಶ್ರೀ ಹೆಚ್ ವಿ ವಕೀಲರಿಂದ

ನನಗೆ 1 ರಿಂದ 3 ನೇ ಪ್ರತಿವಾದಿಗಳು ತುಂಬಾ ವರ್ಷಗಳಿಂದ ಪರಿಚಯ ಇದೆ. ನಾನು ನಾರಾಯಣಸ್ವಾಮಿ ರವರ ಹೆಸರಿನಲ್ಲಿ ಇದ್ದ ಪಹಣಿಗಳನ್ನು ನೋಡಿರುತ್ತೇನೆ. ಈ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ದಾವಾ ಆಸ್ತಿಯು ಮೂಲ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಶಂಕರಪ್ಪನವರಿಗೆ ಸರ್ಕಾರದಿಂದ ಮಂಜೂರಾಗಿರುವ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯನ್ನು ಸರ್ಕಾರದವರು 15 ವರ್ಷ ಪರಭಾರೆ ಮಾಡದಂತೆ ನಿಭಂಧನೆ ಹಾಕಿ ಮಂಜೂರು ಮಾಡಿದೆ ಎಂದರೆ ಸರಿ. ನಾನು ಪ್ರತಿವಾದಿಗಳ ಹೆಸರಿನಲ್ಲಿ ದಾವಾ ಆಸ್ತಿ ಇರುವ ಬಗ್ಗೆ ದಾಖಲಾತಿ ಕೊಟ್ಟಿರುತ್ತೇನೆ. ದಾವ ಸ್ವತ್ತಿನ ಪಹಣಿ ಒಟ್ಟು ಎಷ್ಟು ಬರುತ್ತದೆ ಗೊತ್ತಿಲ್ಲ. ದಾವಾ ಸ್ವತ್ತಿಗೆ 7 ಪಹಣಿಗಳು ಬರುತ್ತದೆ ಎಂದರೆ ಸರಿ.

2016 ನೇ ವರ್ಷದ 10 ನೇ ತಿಂಗಳಲ್ಲಿ ಮಾತುಕತೆ ಆಗಿರುತ್ತದೆ. ಮತುಕತೆಗೆ ಆಂಜಪ್ಪ ಎಂಬುವವರು ಮಾತುಕತೆಗೆ ಬಂದಿದ್ದರು. 1,32,000/- ರೂಗಳಿಗೆ ಮಾತುಕತೆಯಾಗಿದೆ. 10 ನೇ ತಿಂಗಳು 20 ನೆ ತಾರೀಖು 1,30 , 000/- ಹಣ ಕೊಟ್ಟಿರುತ್ತೇನೆ. ಆ ವೇಳೆಯಲ್ಲಿ ಸಾಕ್ಷಿದಾರರಾಗಿ ನಾಗರಾಜಪ್ಪ

ಮತ್ತು ರಾಮಚಂದ್ರಪ್ಪ ಸಹಿ ಮಾಡಿರುತ್ತಾರೆ. ನಾಗರಾಜಪ್ಪ ನನಗೆ ಪರಿಚಯ ಅವರು ಗಡದಾಸನಹಳ್ಳಿ ಗ್ರಾಮದವರು.

ನನಗೆ ಕರಾರು ಆದ ಮೂರು ತಿಂಗಳು ಒಳಗೆ ಕ್ರಯ ಮಾಡಿಕೊಡುವುದಾಗಿ ಹೇಳಿದ್ದರು. ಮೂರು ತಿಂಗಳು ಆದ ನಂತರ ಕ್ರಯದ ಕರಾರು ಪತ್ರದ ನೆರವೇರಿಕೆಗಾಗಿ ನಾನು ನೋಟೀಸು ಕೊಟ್ಟಿರುತ್ತೇನೆ ಅದನ್ನು ನ್ಯಾಯಾಲಯಕ್ಕೆ ಹಾಜರುಮಾಡಿರುತ್ತೇನೆ. ಆ ನೋಟಿಸು ಅವರಿಗೆ ತಲುಪಿದೆ ತಿಳಿದುಕೊಂಡಿರುತ್ತೇನೆ. ನಾರಾಯಣಸ್ವಾಮಿ ರವರಿಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲ ಎಂದರೆ ಸರಿ. ಕ್ರಯದ ಕರಾರು ಪತ್ರ ನಿಪಿ1 ರ ಎರಡನೇ ಪುಟದ 1 ನೇ ಖಂಡಿಕೆಯಲ್ಲಿ ಈ ಸ್ವತ್ತು ಮೊದಲಿಗೆ ನಮ್ಮ ಕುಟುಂದ ಸಧಸ್ಯರಾದ ನಾರಾಯಣಸ್ವಾಮಿ ರವರ ಸ್ವಯಾರ್ಜಿತ ಸ್ವತ್ತಾಗಿದ್ದು ಚಿಂತಾಮಣಿ ತಾಲ್ಲೂಕು ತಹಸೀಲ್ದಾರ್ ರವರಿಂದ ಎಲ್ ಎನ್ ಡಿ ಆರ್ ಡಿ ಒ 44/94-95 ರಂತೆ ದಿ:14-08-1995 ರಲ್ಲಿ ದರಕಾಸ್ತುನಲ್ಲಿ ಮಂಜೂರಾಗಿದ್ದು ಎಂ ಆರ್ ನಂ.126-38/2001 ರಂತೆ ನಾರಾಯಣಸ್ವಾಮಿ ಹೆಸರಿಗೆ ಖಾತೆಯಾಗಿದ್ದು ಎಂದು ಇದ್ದು ಈ ಬಗ್ಗೆ ಮುಟೇಷನ್ ನೋಡಿರುತ್ತೇನೆ. ನನಗೆ ನಾರಾಯಣಸ್ವಾಮಿ ಮತ್ತು ಶಂಕರಪ್ಪನ ಹೆಸರಿಗೆ ಖಾತೆ ಇದ್ದ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ನೋಡಿರುತ್ತೇನೆ. ದಾವಾ ಸ್ವತ್ತಿನ ಸರ್ವೆ ನಂಬರ್ ನಲ್ಲಿ ಒಟ್ಟು ಎಷ್ಟು ಜಮೀನು ಇದೆ ಎಂದು ನೋಡಿಲ್ಲ. ನನಗೆ ದಾವಾ ಆಸ್ತಿಯ ಚೆಕ್ಕುಬಂದಿ ಗೊತ್ತು. ಪೂರ್ವಕ್ಕೆ ವೆಂಕಟಮ್ಮ ನವರು, ಪಶ್ಚಿಮಕ್ಕೆ ಕದಿರಪ್ಪ, ಉತ್ತರಕ್ಕೆ ಸುಬ್ಬಮ್ಮ, ದಕ್ಷಿಣಕ್ಕೆ ವಿನಾಯಕ. ಶಂಕರಪ್ಪನ ಹೆಂಡತಿ ಸಹಿ ಮಾಡುತ್ತಾರೆ.

ನನ್ನ ಯಜಮಾನರು ಕೂಲಿ ಕೆಲಸ ಮಾಡುತ್ತಾರೆ. ನಾನೂ ಕೂಡ ಕೂಲಿ ಕೆಲಸ ಮಾಡುತ್ತೇನೆ. ನಾನು ಕರಾರು ಪತ್ರಗಳ ಮೇಲೆ ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಗೆ 92 ಸಾವಿರ ರೂ ಹಣ ಕೊಟ್ಟು 2 ರೂಪಾಯಿ ಬಡ್ಡಿಯಂತೆ ಭದ್ರತೆಗಾಗಿ ಕರಾರು ಪತ್ರ ಬರೆಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಮತ್ತು 3 ಮತ್ತು 4 ರವರು ಅವಶ್ಯಕವಲ್ಲದಿದ್ದರೂ ಸಹ ಪಕ್ಷಗಾರರನ್ನಾಗಿ ಸೇರಿಸಿದ್ದೇನೆ ಎಂದರೆ ಸಾಕ್ಷಿಯು ಸೇರಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ದಾವಾ ಅಸ್ತಿಯ ಹಳೇಪಹಣಿಗಳನ್ನು ನೋಡಿಲ್ಲ.

ಕರಾರು ಆಗುವ ವೇಳೆಯಲ್ಲಿ ಪಹಣಿಯು ನಾರಾಯಣಸ್ವಾಮಿ ಹೆಸರಿನಲ್ಲಿ ಇತ್ತು ಆ ನಂತರ ಇವರ ಹೆಸರಿಗೆ ಬಂದಿರುತ್ತದೆ. ಕರಾರಿಗಿಂತ ಮೊದಲೇ ನಾರಾಯಣಸ್ವಾಮಿ ತೀರಿಕೊಂಡಿರುತ್ತಾರೆ. ಬಡ್ಡಿ ವ್ಯವಹಾರಕ್ಕಾಗಿ ಕರಾರು ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ 20 ಗುಂಟೆ ಆಸ್ತಿಯು ಎಷ್ಟು ಬೆಲೆ ಬಾಳುತ್ತದೆ ಎಂದು ಗೊತ್ತಿಲ್ಲ.

ನ್ಯಾಯಾಲಯದ ಬೆಳಗಿನ ಅವದಿ ಮುಗಿದ ಕಾರಣ ಪಾಟೀಸವಾಲನ್ನು ಮದ್ಯಾಹ್ನಕ್ಕೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ